ಡಾ.ಹೆಚ್.ಸಿ.ಮಹದೇವಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ ರಾಜ್ಯದಲ್ಲಿ ಸುಮಾರು 30ಕ್ಕೂ ಹೆಚ್ಚು ರಕ್ತ ನಿಧಿಗಳನ್ನು ಸ್ಥಾಪನೆ ಮಾಡುವುದಕ್ಕೆ ಕ್ರಮಕೈಗೊಂಡಿದ್ದೇವೆ. ಈ ಅಪಘಾತಗಳು ಆದಾಗಲೇ ರಕ್ತ ಬೇಕಾಗುವುದು. ಮತ್ತು ಈ ಆಕ್ಸಿಡೆಂಟ್, ಸರ್ಜರಿ, ಈ ರೀತಿಯ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. 21ನೇ ತಾರೀಖು, ಅಂದರೆ ನಾಳೆ, ಎಲ್ಲಾ ಮಾನ್ಯ ಶಾಸಕರು, ಸೆಕ್ರೆಟರಿ ಇವರೆಲ್ಲಾ voluntary donation of blood ಕೊಡಬೇಕೆಂದು ತಾವೇ ನಿನ್ನೆ ಬೆಳಿಗ್ಗೆ ಹೇಳಿದಿರಿ. ಆದ್ದರಿಂದ ವಾಲೆಂಟರಿಯಾಗಿ ಎಲ್ಲರೂ ರಕ್ತವನ್ನು ದಾನ ಮಾಡಿದರೆ, ರಕ್ತ ಇಲ್ಲ ಎಂದು ಹುಡುಕಾಡಬೇಕಾದ ಅವಶ್ಯಕತೆಯೇ ಇರುವುದಿಲ್ಲ. ಇಲ್ಲಿ ಅನೇಕ ಜನ ಶಾಸಕರು ಯುವಕರಿದ್ದೀರಿ ಹಿರಿಯ ಸಚಿವರು ಇದ್ದೀರಿ ಕೊಡತಕ್ಕಂತವರನ್ನು ಮೋಟಿವೇಷನ್ ಮಾಡಿ ಅಲ್ಲೇ ರಕ್ತವನ್ನು ಕೊಟ್ಟು ಪ್ರಾಣವನ್ನು ಉಳಿಸುವಂತಹ ಕೆಲಸ ಮಾಡಬೇಕು.... ರಕ್ತಕ್ಕೆ ಪರ್ಯಾಯವಾದಂತಹ ವಸ್ತುವನ್ನು ತಯಾರು ಮಾಡುವುದಕ್ಕೆ ಸಾಧ್ಯ ಇಲ್ಲದೇ ಇರುವುದರಿಂದ....

ಅಧ್ಯಕ್ಷರು: ನಮ್ಮ ರಕ್ತವನ್ನು ಕೊಡಬಹುದು ತಾನೇ?

ಡಾ: ಹೆಚ್.ಸಿ.ಮಹದೇವಪ್ಪ: ಕೊಡಬಹುದು, ಆದರೆ ಎಚ್.ಐ.ವಿ.ಯಿಂದ ಸೇಫ್ ಆಗಿ ಇದೆಯಾ ಎಂದು ನೋಡಿಕೊಂಡು ಇನ್‌ಫೆಕ್ಷನ್ ಫ್ರೀ ಇದೆಯೇ ಎಂಬುದನ್ನು ನೋಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ಡಿಸೆಂಬರ್ 1996ರೊಳಗೆ ರಕ್ತ ನಿಧಿ ಬ್ಯಾಂಕ್ ಯಾವುದು ಇದೆ, ಅದನ್ನು ಮಾಡಬೇಕಾಗಿತ್ತು. ಆದರೆ ಅನೇಕ ಸರ್ಕಾರಿ ಆಸ್ಪತ್ರೆಯಲ್ಲಿ ಇವತ್ತಿನವರೆವಿಗೂ ಅದು ನಿಯಮಾವಳಿ ಪ್ರಕಾರ ಆಗಿಲ್ಲ. ಇದಕ್ಕೆ ಮಾನ್ಯ ಸಚಿವರು ಉತ್ತರಿಸುತ್ತೀರೋ?

ಡಾ. ಹೆಚ್.ಸಿ.ಮಹದೇವಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ ಸರಿಯಾಗಿ ಇಲ್ಲ ಎಂದು ಹೇಳುವುದು ಸರಿ ಅಲ್ಲ. ಏಕೆಂದರೆ ನಾವು ಖುದ್ದಾಗಿ ನಾವು ಅನೇಕ ರಕ್ತ ನಿಧಿ ಆಸ್ಪತ್ರೆಗೆ ಭೇಟಿ ಮಾಡಿದ್ದೇನೆ, ಮತ್ತು ಸಭೆಗಳನ್ನು ನಡೆಸಿದ್ದೇನೆ, ಮತ್ತು ನಿರ್ದಿಷ್ಟವಾದ ಸೂಚನೆಗಳನ್ನು ಕೊಟ್ಟಿದ್ದೇನೆ. ಈಗಾಗಲೇ ವಿಶ್ವ ರಕ್ತಬ್ಯಾಂಕ್ ನಿಧಿಗಳ ಆಧುನೀಕರಣಕ್ಕೆ ಹಣವನ್ನು ಸಹ ಕೊಟ್ಟಿದೆ. ಆದಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಈಗಾಗಲೇ ಸುಮಾರು 24 ಸರ್ಕಾರಿ ಆಸ್ಪತ್ರೆಗಳಲ್ಲಿ ಲೈಸೆನ್ಸ್ ಪಡೆದಿರುವಂತಹ ರಕ್ತ ನಿಧಿಗಳು ಕೆಲಸವನ್ನು ಮಾಡುತ್ತಾ ಇವೆ.

ವಿಷಯ: ಮೊರಾರ್ಜಿದೇಸಾಯಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರಗಳ ವಿತರಣೆ.

473 (3019)

ಶ್ರೀ ಡಿ.ಆರ್:ಪಾಟೀಲ್ (ಗದಗ):

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಎಷ್ಟು ಆರಂಭಗೊಂಡಿವೆ; ಎಲ್ಲೆಲ್ಲಿ ಆರಂಭಿಸಲಾಗಿದೆ?

ಆ) ಈ ವಸತಿ ಶಾಲೆಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಮೊರಾರ್ಜಿಯವರಿಗೆ ಅತಿಪ್ರಿಯವಾದ ಖಾದಿ ಬಟ್ಟೆಯ ಸಮವಸ್ತ್ರವನ್ನೇ ಕೊಡಲು ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಿಸುವ ಈ ಸಂದರ್ಭದಲ್ಲಿ ಸರ್ಕಾರ ನಿರ್ಣಯ ಕೈಗೊಳ್ಳುವುದೇ?

ಇ) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಈಗ ಅಧ್ಯಯನ ಮಾಡುತ್ತಿರುವ ಒಟ್ಟು ಮಕ್ಕಳ ಸಂಖ್ಯೆ ಎಷ್ಟು?

ಈ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಎಷ್ಟು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಶಿಕ್ಷಣ ಇಲಾಖೆಯ ವತಿಯಿಂದ 20 ಶಾಲೆಗಳು ಆರಂಭಗೊಂಡಿದೆ. ಪ್ರತಿ ಜಿಲ್ಲೆಯಲ್ಲಿ ಒಂದರಂತೆ, ಆರಂಭಿಸಲಾಗಿದೆ. ಈ ಶಾಲೆಗಳು ನಡೆಯುತ್ತಿರುವ ಸ್ಥಳಗಳನ್ನು ಅನುಬಂಧದಲ್ಲಿ ತೋರಿಸಿದೆ.

ಆ) 1997-98ನೇ ಸಾಲಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಸಮವಸ್ತ್ರ ಒದಗಿಸಲು ಈಗಾಗಲೇ ಜಿಲ್ಲಾ ಉಪನಿರ್ದೇಶಕರುಗಳು ಕ್ರಮಕೈಗೊಂಡಿದ್ದು ಈ ವರ್ಷ ಖಾದಿ ಸಮವಸ್ತ್ರ ನೀಡಿಕೆಯ ಬಗ್ಗೆ ಕಡ್ಡಾಯ ಮಾಡಲು ಸಾಧ್ಯವಾಗುವುದಿಲ್ಲ. ಆದಾಗ್ಯೂ 97-98ನೇ ಸಾಲಿನಲ್ಲಿ ಈ ಶಾಲೆಗಳ ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರಗಳನ್ನು ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಶಿಕ್ಷಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಒಟ್ಟು 20 ಶಾಲೆಗಳಲ್ಲಿ 2200 ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ.

ಈ) ಇಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಶಾಲೆಯ ಸ್ಥಳ
1)	ಬೆಂಗಳೂರು ದಕ್ಷಿಣ	ಚಾಮರಾಜಪೇಟೆ
2)	ಬೆಂಗಳೂರು ಗ್ರಾಮಾಂತರ	ಬಳೇಪೇಟೆ
3)	ಕೋಲಾರ	ಮಾದನಹಳ್ಳಿ
4)	ತುಮಕೂರು	ಸಿದ್ದರಬೆಟ್ಟ
5)	ಶಿವಮೊಗ್ಗ	ಗಾಜನೂರು
6)	ಚಿತ್ರದುರ್ಗ	ಕಾತ್ತಾಳ
7)	ಮೈಸೂರು	ನಂಜನಗೂಡು,
8)	ಮಂಡ್ಯ	ಕೆರೆತೊಣ್ಣೂರು
9)	ಹಾಸನ	ಯಗಚಿ
10)	ಚಿಕ್ಕಮಗಳೂರು	ಚಿಕ್ಕಮಗಳೂರು
11)	ಕೊಡಗು	ಬಸವನಹಳ್ಳಿ
12)	ದಕ್ಷಿಣ ಕನ್ನಡ	ಮುಲ್ಕಿ
13)	ಬೆಳಗಾವಿ	ಸಂಕೇಶ್ವರ
14)	ಬಿಜಾಪುರ	ಬಂಧನಾಳ
15)	ಧಾರವಾಡ	ನೆಗಳೂರು
16)	ಉತ್ತರ ಕನ್ನಡ	ರಾಯಪ್ಪ ಪ್ರತಿಕುಲ
17)	ಗುಲ್ಬರ್ಗ	ಕೆಂಬಾವಿ
18)	ಬಳ್ಳಾರಿ	ಕಂಪ್ಲಿ
19)	ರಾಯಚೂರು	ಕುಷ್ಟಗಿ
20)	ಬೀದರ	ಬಸವಕಲ್ಯಾಣ

ಶ್ರೀ ಜಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಸಚಿವರು ಉತ್ತರ ನೀಡುತ್ತಾ ಇಪ್ಪತ್ತೊಂದರಂತೆ ಇಪ್ಪತ್ತು ಜಿಲ್ಲೆಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ. ಆದರೆ, ಆಗಸ್ಟ್ 15ರಿಂದೀಚೆಗೆ ಪುನಃ ಏಳು ಹೊಸ ಜಿಲ್ಲೆಗಳು ಪ್ರಾರಂಭವಾಗುತ್ತಿರುವುದರಿಂದ, ಇದರಲ್ಲಿ ಗದಗ ಕೂಡ ಒಂದಾಗಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದಲಾದರೂ ಎಲ್ಲಾ ಜಿಲ್ಲೆಗಳಲ್ಲೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುತ್ತೀರಾ? ಇನ್ನೊಂದು ವಿಚಾರವೇನೆಂದರೆ, ಮೊರಾರ್ಜಿ ದೇಸಾಯಿಯವರಿಗೆ ಖಾದಿ ಬಗ್ಗೆ ಒಳ್ಳೆಯ ಅಭಿಪ್ರಾಯವಿದ್ದುದು ತಮಗೆಲ್ಲರಿಗೂ ಗೊತ್ತು. ಆದುದರಿಂದ, ಈ ಶಾಲೆಗಳಲ್ಲಿ ಕಲೆಯುತ್ತಿರುವಂಥ ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರವನ್ನು ನೀಡಲು ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ನಿರ್ಣಯ ಕೈಗೊಳ್ಳುವುದೇ ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ ಈ ವರ್ಷ ಖಾದಿ ಸಮವಸ್ತ್ರ ನೀಡಿಕೆಯ ಬಗ್ಗೆ ಕಡ್ಡಾಯ ಮಾಡಲು ಸಾಧ್ಯವಾಗುವುದಿಲ್ಲ. ಆದಾಗ್ಯೂ 1998-99ನೇ ಸಾಲಿನಲ್ಲಿ ಈ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರಗಳನ್ನು ನೀಡುವ ಬಗ್ಗೆ ಪರಿಶೀಲಿಸಲಾಗುವುದೆಂದಿದ್ದಾರೆ. ಆದುದರಿಂದ, ಇದರ ಬಗ್ಗೆ ಪರಿಶೀಲಿಸುವುದು ಬೇಡ, ಮುಂದಿನ ವರ್ಷದಿಂದ ನೀಡುತ್ತೇವೆ ಎನ್ನುವಂಥ ಭರವಸೆ ಕೊಡಬೇಕು.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೆ, ಈಗಿರುವ ಇಪ್ಪತ್ತು ಜಿಲ್ಲೆಗಳಲ್ಲಿ ಪ್ರತಿಜಿಲ್ಲೆಯ ಯಾವುದಾದರೊಂದು ತಾಲ್ಲೂಕು, ಜಿಲ್ಲೆ ಅಥವಾ ವಿಭಾಗವನ್ನು ಐಡೆಂಟಿಫೈ ಮಾಡಿಕೊಂಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆದಿದ್ದೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ ಮುಂದೆ ಹೊಸದಾಗಿ ರಚನೆಯಾಗುವ ಜಿಲ್ಲೆಗಳಿಗೂ ಇದನ್ನು ವಿಸ್ತರಿಸುತ್ತೀರಾ ಎಂದು ಕೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲಿಸುತ್ತೇನೆ. ಎರಡನೆಯದಾಗಿ, ಖಾದಿ ಬಟ್ಟೆ ವಿಚಾರವಾಗಿ ಹೇಳಬೇಕೆಂದರೆ, ಮೊರಾರ್ಜಿದೇಸಾಯಿಯವರು ಖಾದಿ ಪ್ರಿಯರಾಗಿದ್ದು, ಅವರ ಬಗ್ಗೆ ಎಲ್ಲರಿಗೂ ಗೌರವವಿದೆ. ಸದರಿ ವಸತಿ ಶಾಲೆಗಳು ಈ ವರ್ಷ ಪ್ರಾರಂಭವಾಗಿರುವುದರಿಂದ ಖಾದಿ ಸಮವಸ್ತ್ರವನ್ನು ಕಡ್ಡಾಯಗೊಳಿಸುವುದಕ್ಕಾಗಲಿಲ್ಲ. 1998-99ನೇ ಸಾಲಿನಲ್ಲಿ ಖಚಿತವಾಗಿ ಖಾದಿ ಸಮವಸ್ತ್ರ ಒದಗಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಮಸ್ಯೆಯೇನೆಂದರೆ, ನಾನು ಈ ಪ್ರಶ್ನೆಯನ್ನು ಸಮಾಜ ಕಲ್ಯಾಣ ಸಚಿವರಿಗೆ ಕೇಳಿದ್ದೆ. ಆದರೆ, ಪ್ರಶ್ನೆಯನ್ನು ಶಿಕ್ಷಣ ಸಚಿವರಿಗೆ ವರ್ಗಾಯಿಸಿದ್ದಾರೆ. ನನ್ನ ಪ್ರಶ್ನೆಯಿದ್ದುದು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರಾತಿ ಮಾಡಿಕೊಡಬೇಕೆಂದು ಕೇಳಿದ್ದೆ. ಇದಕ್ಕೆ ಸಮಾಜ ಕಲ್ಯಾಣ ಸಚಿವರೇ ದಯಮಾಡಿ ಉತ್ತರಿಸಬೇಕು. 1996-97ನೇ ಸಾಲಿನಲ್ಲಿ ಸುಮಾರು 40 ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದ್ದು, ಅದರಲ್ಲಿ ಒಂದು ಜಿಲ್ಲೆಗೆ 7 ಮತ್ತೊಂದು ಜಿಲ್ಲೆಗೆ 5, 4, ಈ ತರಹ ಮಂಜೂರಾತಿ ಮಾಡಿ

ತಾರತಮ್ಯವುಂಟಾಗಿದೆ, ನಮ್ಮ ಹಾಸನ ಜಿಲ್ಲೆಗೆ ಒಂದನ್ನು ಮಂಜೂರು ಮಾಡಿದ್ದಾರೆ. ನನ್ನದು ಮೀಸಲು ಕ್ಷೇತ್ರವಾಗಿರುವುದರಿಂದ ನಾನೂ ಕೇಳಿದ್ದೇನೆ. ಆದಕಾರಣ, ಅವರಿಗೆ ಪ್ರಶ್ನೆ ಕೇಳಿದ್ದೆ. ತಾವು ಈ ಪ್ರಶ್ನೆಯನ್ನು ಆ ಇಲಾಖೆಗೆ ವರ್ಗಾಯಿಸಿದರೆ ನಾನು ಇನ್ನೊಂದು ದಿವಸ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆಯ ಭಾಗವನ್ನು ವರ್ಗಾಯಿಸುತ್ತೇನೆ.

ಶ್ರೀ ಚಂದ್ರಶೇಖರ್ ಸದಾಶಿವನಾಯಕ್: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಕೇವಲ ಎರಡು ಸ್ಥಾನಗಳು ಮಾತ್ರ ಮೀಸಲಾಗಿವೆ. ಮೊರಾರ್ಜಿ ದೇಸಾಯಿ ವಸತಿ ಶಾಲೆ ಸ್ಥಾಪಿಸಲು ಈ ವಿಚಾರದಲ್ಲಿ ಈಗಾಗಲೇ ಅದಕ್ಕೆ ಅಗತ್ಯವಿರುವ ಸ್ಥಳವನ್ನು ಸೂಚಿಸಿ ತಾಲ್ಲೂಕು, ಜಿಲ್ಲೆಯಿಂದ ಶಿಫಾರಸ್ಸು ಮಾಡಿ ಕಳುಹಿಸಿದರೂ ನಮ್ಮ ತಾಲ್ಲೂಕಿಗೆ ಮಂಜೂರಾಗಲಿಲ್ಲ. ಎಲ್ಲಿ ಪರಿಶಿಷ್ಟ ಪಂಗಡದವರು ಕಡಿಮೆ ಸಂಖ್ಯೆಯಲ್ಲಿದ್ದಾರೋ ಅಲ್ಲಿ ಮಂಜೂರಾಗಿದ್ದು, ಪರಿಶಿಷ್ಟ ಪಂಗಡದವರು ಜಾಸ್ತಿ ಸಂಖ್ಯೆಯಲ್ಲಿರುವ ವಿರಾಜಪೇಟೆ ಮತ್ತು ಗೋಕಾಕ್‌ಗೆ ವಸತಿ ಶಾಲೆ ಮಂಜೂರಾಗಬೇಕಾಗಿತ್ತು. ವಸತಿ ಶಾಲೆ ಸ್ಥಾಪಿಸಬೇಕೆಂದು ಎಷ್ಟು ಹೇಳಿದರೂ ಮಂಜೂರಾಗಲಿಲ್ಲ. ಆದುದರಿಂದ ಯೋಜನೆಯಲ್ಲಿ ಪ್ರ ಪ್ರಥಮವಾಗಿ ಗೋಕಾಕ್ ತಾಲ್ಲೂಕನ್ನು ಅಳವಡಿಸಬೇಕೆಂಬ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಗೋಕಾಕ್‌ಗೆ ವಸತಿ ಶಾಲೆಯನ್ನು ನಾನು ಮಂಜೂರು ಮಾಡಿಸಿಕೊಡುತ್ತೇನೆ.

ವಿಷಯ: ಹುಕ್ಕೇರಿ-ಸಂಕೇಶ್ವರಕ್ಕೆ ನೀರು ಸರಬರಾಜಿನ ಪೈಪ್‌ಲೈನ್ ಕಾಮಗಾರಿ

474 (3523)

ಶ್ರೀ ಎ.ಬಿ.ಪಾಟೀಲ್ (ಸಂಕೇಶ್ವರ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಡಕಲ್ ಜಲಾಶಯದಿಂದ ಜಂಟಿ ನೀರು ಸರಬರಾಜು ಯೋಜನೆ ಅಡಿಯಲ್ಲಿ ಹುಕ್ಕೇರಿ-ಸಂಕೇಶ್ವರ ಮತ್ತು ಇತರ ಗ್ರಾಮಗಳಿಗೆ ನೀರು ಪೂರೈಸಲು ಅವಶ್ಯವಿರುವ ಕೊಳವೆ ಮಾರ್ಗದ ಕಾಮಗಾರಿಯನ್ನು ಜಿಲ್ಲಾಪಂಚಾಯತ್ (ಪಿಹೆಚ್‌ಇ) ವತಿಯಿಂದ ಪ್ರಾರಂಭಿಸಲಾಗಿದೆಯೇ?

ಆ) ಪ್ರಾರಂಭಿಸಿದ್ದಲ್ಲಿ ಈಗ ಯಾವ ಹಂತದಲ್ಲಿದೆ? ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? ಇದನ್ನು ಮುಕ್ತಾಯಗೊಳಿಸಲು ಎಷ್ಟು ವರ್ಷಗಳು ಬೇಕಾಗುವುದು?